**ಸಾಕ್ಷಿಯನ್ನು ದಿಃ 20/02/2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಪಾಟೀ ಸವಾಲು ಃ ಶ್ರೀ ಜಿಎಸಎಸ ವಕೀಲರಿಂದ ವಾದಿ ಪರವಾಗಿ.***

ನನ್ನ ಮೂಲ ಊರು ಮುಗಳಿ. ಆದರೆ 35 ವರ್ಷಗಳ ಹಿಂದೆಯೆ ಅಳ್ನಾವರಕ್ಕೆ ಬಂದು ವಾಸ ಮಾಡುತ್ತಿದ್ದೇನೆ. ಅಳ್ನಾವರದಲ್ಲಿ ಮನೆಯನ್ನು ಹೊರತುಪಡಿಸಿ ನಾನು ಜಮೀನು ಖರೀದಿಸಿಲ್ಲ ಎಂದರೆ ನಿಜ. ನಾನು ಪ್ರತಿವಾದಿ ನಂ.1 ಇವರ ಕಡೆಗೆ ಕೆಲಸ ಮಾಡುತ್ತಿದ್ದೇನೆ ಎಂದರೆ ನಿಜ. ಪ್ರತಿವಾದಿ ನಂ.1 ಇವರ ಹೆಂಡತಿ ಅವರನ್ನು ಬಿಟ್ಟು ಹೋದ ಮೇಲೆ ನನ್ನ ಸಹೋದರಿ ಆ ಮನೆಯಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಾವಾದಾಸ್ತಿಗಳು ನಂಬರ, ಕ್ಷೇತ್ರ ಮತ್ತು ಚಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ನಾನು ಪ್ರತಿವಾದಿಯ ಮನೆಯಲ್ಲಿ 30 ವರ್ಷಗಳಿಂದ ಇದ್ದೇನೆ ಎಂದು ನನ್ನ ಪ್ರಮಾಣಪತ್ರದಲ್ಲಿ ಬರೆಸಿರುವುದು ನಿಜವಿರುತ್ತದೆ.

ವಾದಿ ಮತ್ತು ಪ್ರತಿವಾದಿಯ ಮಧ್ಯ ಆಗಿರುವ ವಾಟ್ನಿಯ ಕುರಿತು ದಾಖಲೆ ಬರೆದಿದ್ದಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿದಾರರು ದಾಖಲೆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಈ ರೀತಿ ಸದರಿಯವರು ಯಾವ ಇಸ್ವಿಯಲ್ಲಿ ವಿಭಜನೆ ಮಾಡಿಕೊಂಡರು ಎಂದ ಸಹ ನನಗೆ ಹೇಳಲು ಬರುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ ವಾಟ್ನಿಯಲ್ಲಿ ಯಾವ ಹಿರಿಯರು ಪ್ರಸ್ತುತವಿದ್ದರು ಎಂಬ ಪ್ರಶ್ನೆಗೆ ಸಾಕ್ಷಿದಾರರು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಾನು ಸದರಿ ಸಮಯದಲ್ಲಿ ಪ್ರಸ್ತುತವಿರಲಿಲ್ಲ ಎಂದರೆ ನಿಜ. ವಾದಿ ಮತ್ತು ಪ್ರತಿವಾದಿಯ ನಡುವೆ ಈಗಾಗಲೇ ವಾಟ್ನಿಯಾಗಿದೆ ಎಂದು ಹೇಳಿರುವ ವಿಷಯ ಸಂಗತಿ ಪ್ರತಿವಾದಿಯ ಹೇಳಿಕೆ ಮೇರೆಗೆ ಹೇಳಿರುವ ಸುಳ್ಳು ಸಂಗತಿ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯರು ಮಧ್ಯ ದಾವಾದಾಸ್ತಿಗಳ ವಹಿವಾಟು ಜಂಟಿಯಾಗಿ ನಡೆಯುತ್ತವೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ಇವರ ಮಾತನ್ನು ಕೇಳಿ ಅವರ ಪರವಾಗಿ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

***ಮರು ವಿಚಾರಣೆ ಃ ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.